ಹಾಗೂ ರಷ್ಯಾದ ಸೃಜನಶೀಲ ಕಲಾವಿದರಾದ ಡಾ. ಸ್ಟೆಟೋಸ್ಲವ್ ರೋರಿಕ್‌ವರು ದಿನಾಂಕ ೩೦-೦೧-೧೯೬೩ ರಂದು ನಿಧನರಾದರು.

ಮಹಾನ್ ಕಲಾವಿದರಾಗಿದ್ದ ರೋರಿಕ್‌ರವರು ಭಾವಚಿತ್ರ ರಚನೆಯಲ್ಲಿ ಖ್ಯಾತಿ ಗಳಿಸಿದ್ದವರು. ಶ್ರೀಯುತರು ಬರೆದ ಮಹಾತ್ಮ ಗಾಂಧಿ, ಜವಹರಲಾಲ್ ನೆಹರು ಹಾಗೂ ಶ್ರೀಮತಿ ಇಂದಿರಾ ಗಾಂಧಿಯವರ ಭಾವಚಿತ್ರಗಳು ಪಾರ್ಲಿಮೆಂಟ್ ಭವನದ ಗೋಡೆಗಳಲ್ಲಿ, ಅಲಂಕೃತವಾಗಿವೆ. ಅಂತರರಾಷ್ಟ್ರೀಯ ಭೂಮಿಕೆಯಲ್ಲಿ ಖ್ಯಾತಿ ಗಳಿಸಿರುವ ಅವರ ಚಿತ್ರಗಳು ವಿಶ್ವದ ಪ್ರಮುಖ ಆರ್ಟ್ಸ್‌ಗ್ಯಾಲರಿಗಳು, ಖಾಸಗಿ ಸಂಗ್ರಹಗಳು, ಖ್ಯಾತಿ ಪತ್ರಿಕೆಗಳು ಹಾಗೂ ಪೋಸ್ಟ್ ಕಾರ್ಡ್‌ಗಳಲ್ಲಿ ಪುನರುತ್ಪತ್ತಿ ಕಾಣುತ್ತಲೇ ಇವೆ. ಶ್ರೀಯುತರ ಕಲಾ ಹಿರಿಮೆಗಾಗಿ ಭಾರತ ಸರ್ಕಾರದಿಂದ ಪದ್ಮಭೂಷಣ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕಲ್ಕತ್ತಾ ಕಲಾ ಸಂಘದಿಂದ ಚಿನ್ನದ ಪದಕ ಹಾಗೂ ರಾಜ್ಯ ಪರಿಷತ್ತಿನ ಗೌರವವನ್ನು ನೀಡಿ ಪುರಸ್ಕರಿಸಲಾಗಿತ್ತು.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಸದನ ಅಂಗೀಕರಿಸಿದ ನಿರ್ಣಯವನ್ನು ಮೃತರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ಪ್ರಶ್ನೋತ್ತರ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ:- ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧:- (೪೯೮)
ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)
ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?
ಆ) ಹಾಗಿದ್ದಲ್ಲಿ ಯಾವ ಯಾವ ಇಲಾಖೆಯಲ್ಲಿ (ನಿಗಮ, ಮಂಡಳಿ, ವಿಶ್ವ ವಿದ್ಯಾನಿಲಯ ಸೇರಿದಂತೆ) ಯಾವ ಯಾವ ದರ್ಜೆಯ ಹುದ್ದೆಗಳು ಖಾಲಿ ಇವೆ?
ಇ) ಈ ಮೇಲ್ಕಂಡ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೇ ಇರಲು ಕಾರಣಗಳೇನು?
ಈ) ಎಷ್ಟು ಸಮಯದೊಳಗಾಗಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

ಬಂದಿದೆ.

ಸಿದ್ಧವಾದ ವಿವರಗಳು ಸದ್ಯಕ್ಕೆ ಲಭ್ಯವಾಗಿರುವುದಿಲ್ಲ.

ಆರ್ಥಿಕ ಮಿತವ್ಯಯ ಹಾಗೂ ನೇರ ನೇಮಕಾತಿ ನಿರ್ಬಂಧ ಆದೇಶ ಜಾರಿಯಲ್ಲಿರುವುದರಿಂದ.

ಅಗತ್ಯತೆಯ ಆಧಾರದ ಮೇಲೆ ರಿಕ್ತ ಸ್ಥಾನಗಳನ್ನು ಈಗಲೂ ಭರ್ತಿ ಮಾಡಬಹುದಾಗಿದೆ.

ಶ್ರೀ ಹೆಚ್.ಎಂ. ರೇವಣ್ಣ:- ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಖಾಲಿ ಇರುವ ಹುದ್ದೆಗಳ ಬಗ್ಗೆ ಇದೆ. ಈಗ ಸಾವಿರಾರು ಹುದ್ದೆಗಳು ಖಾಲಿ ಇವೆ ಎನ್ನುವಷ್ಟಕ್ಕೆ ವಿಷಯ ತಮಗೆಲ್ಲರಿಗೂ ಗೊತ್ತಿದೆ. ಆದ್ದರಿಂದ ಯುವ ಜನತೆ ಮತ್ತು ಈಗಿನ ನಿರುದ್ಯೋಗಿ ಅಭ್ಯರ್ಥಿಗಳಿಗೆ ಉದ್ಯೋಗವನ್ನು ಕಲ್ಪಿಸಲು ಸರ್ಕಾರ ತೀವ್ರವಾದ ಕ್ರಮ ತಗೆದುಕೊಳ್ಳಬೇಕು. ಮತ್ತು ಇವತ್ತಿನ ನಾಡಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಇದೇ ರೀತಿ ಮುಂದುವರಿಯಲು ಬಿಟ್ಟರೆ ಯುವ ಜನತೆ ಬೇರೆ ದಿಕ್ಕಿಗೆ ತಿರುಗುತ್ತಾರೆ. ತಾವು ಏನು ನೂರು ದಿನದ ಕಾರ್ಯಕ್ರಮವನ್ನು ಹಾಕಕೊಂಡಿದ್ದೀರಿ ಅದು ಯಶಸ್ವಿಯಾಗಬೇಕಾದರೆ ಅಡಳಿತ ಯಂತ್ರ ಚುರುಕು ಆಗಬೇಕು. ಈ ದಿಸೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ, ಅದಕ್ಕಾಗಿ ನೇಮಕಾತಿ ಸಮಿತಿಗಳನ್ನು ರಚನೆ ಮಾಡುತ್ತೀರಾ ಎನ್ನುತಕ್ಕ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೆ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದೆ ಇರತಕ್ಕಂಥ ಕಟ್ಟುನಿಟ್ಟಿನ ನಿರ್ಬಂಧವೇನೂ ಈಗ ಇಲ್ಲ. ಈಗ ಮುಖ್ಯವಾಗಿ ಆರೋಗ್ಯ, ಪೋಲೀಸು ಮತ್ತು ಶಿಕ್ಷಣ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಯಾವ ಆಕ್ಷೇಪಣೆಯೂ ಇಲ್ಲ. ಈ ಇಲಾಖೆಗಳಿಗೆ ನೇಮಕಾತಿಯಲ್ಲಿ ಪೂರ್ತಿ ಸಡಿಲಿಕೆಯನ್ನು ಮಾಡಿದ್ದೇವೆ. ಇನ್ನು ಉಳಿದ ಇಲಾಖೆಗಳಲ್ಲಿಯೂ ಕೂಡ ಮಾಡಲಾಗುವುದು. ಸರ್ಕಾರಿ ಕ್ಷೇತ್ರದಲ್ಲಿ ಹುದ್ದೆಗಳನ್ನು ಕೊಡಿಸುವುದು ಮುಖ್ಯವಲ್ಲ. ಆದರೆ ಅಂಥ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ಅವಶ್ಯಕತೆ ಇದ್ದರೆ ಆದ್ಯತೆಯ ಮೇಲೆ ಅವುಗಳನ್ನು ತುಂಬಿಸಲಿಕ್ಕೆ ನಾವು ಯಾವಾಗಲೂ ಅನುಮತಿ ಕೊಡುತ್ತೇವೆ. ಆದ್ದರಿಂದ ಇದಕ್ಕೆ ಕಟ್ಟುನಿಟ್ಟಾದಂಥ ನಿರ್ಬಂಧವೇನೂ ಇಲ್ಲ. ಆದರೆ ಈ ಮೂರು ಇಲಾಖೆಗಳಿಗೆ ಸಂಬಂಧಪಟ್ಟಂತೆ ಪೂರ್ತಿ ಸಡಿಲ ಮಾಡಿದ್ದೇವೆ. ಉಳಿದ ಇಲಾಖೆಗಳಲ್ಲಿ ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಅದನ್ನು ತುಂಬಿಸಲಿಕ್ಕೆ ಕ್ರಮವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಏನು ಹೆಸರು ರಿಜಿಸ್ಟರ್ ಆಗುತ್ತದೆ, ಅವರೊಬ್ಬರಿಗೂ ಇಂಟರ್‌ವ್ಯೂಗಾಗಲೀ, ಸಂದರ್ಶನಕ್ಕಾಗಲಿ ಅವಕಾಶ ಇಲ್ಲದೆ ಇದು ಬರೀ ನಾಮಕಾವಸ್ತೆಯಾಗಿ ಇದೆ. ಅನ್‌ಎಂಪ್ಲಾಯ್ಡ್ ಗ್ರಾಜ್ಯುಯೇಟ್ಸ್ ಬಹಳ ಜನರಿದ್ದಾರೆ ಉದ್ಯೋಗಕ್ಕಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡು ಉದ್ಯೋಗಕ್ಕಾಗಿ ಕಾಯುತ್ತಿದ್ದಾರೆ. ಹತ್ತಾರು ವರುಷಗಳಿಂದ ಕೆಲಸಕ್ಕಾಗಿ ರಿಜಿಸ್ಟ್ರೇಷನ್ ಮಾಡಿಸಿಕೊಂಡು ಕಾಯುತ್ತಿರುವವರಿಗೆ ಸಂದರ್ಶನಕ್ಕೆ ಅವಕಾಶ ಮಾಡಿಕೊಟ್ಟು ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನ ಉದ್ದೇಶ, ಅದರ ಪ್ರಾಮುಖ್ಯತೆಯನ್ನು ಸಫಲ ಮಾಡುವ ಕಡೆ ಗಮನ ಕೊಡುತ್ತೀರಾ?

ಒಬ್ಬ ಮಾನ್ಯ ಸದಸ್ಯರು:- ನಮ್ಮಲ್ಲಿ ಒಂದು ಕೈಗಾರಿಕೆಯನ್ನು ಪ್ರಾರಂಭ ಮಾಡಲಿಕ್ಕೆ ಸರಕಾರದಿಂದ ಒಂದು ಅಪ್ಲಿ ಹೊರಡಿಸಿದ್ದು ಇನ್ನೂ ಅಲ್ಲಿ ಆ ಉದ್ದಿಮೆಗೆ ಬೇಕಾದ ಹುದ್ದೆಗಳನ್ನು ಫಿಲಪ್ ಮಾಡದೆ ಹಾಗೇ ಖಾಲಿ ಬಿದ್ದಿದೆ. ಅವರನ್ನು ಕೇಳಿದರೆ ಸರಕಾರದಲ್ಲಿ ಬ್ಯಾನ್ ಆರ್ಡರ್ ಇರುವುದರಿಂದ ಮಾಡುವುದಕ್ಕಾಗುವುದಿಲ್ಲವೆಂದು ಉತ್ತರ ಕೊಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಇನ್ನೊಂದು ವಿಚಾರ ಏನು ನಡೆದಿದೆ ಎಂದರೆ, ಬಹಳ ಸಮಯದಿಂದ ಈ ನಿರ್ಬಂಧ ಇದ್ದುದರಿಂದ ಆ ಇಲಾಖೆಯವರು ಹೆಪ್ಪುಗಟ್ಟಿದ ಹಾಗೆ ಮಾಡಿದ್ದಾರೆ. ಅವರು ಇನಿಷಿಯೇಟೀವ್ ತೆಗೆದುಕೊಂಡು ಪ್ರಪೋಸಲ್ಸ್ ಕಳಿಸುವುದಿಲ್ಲ. ಎಲ್ಲಿ ಅವಶ್ಯಕತೆ ಇದೆ ಆ ಇಲಾಖೆಗಳಲ್ಲಿ ಈ ಹುದ್ದೆಗಳನ್ನು ತುಂಬಿಸದಿದ್ದರೆ ನಡೆಯುವುದಿಲ್ಲ ಎನ್ನುವ ಪ್ರಶ್ನೆ ಇದ್ದರೆ ಅದನ್ನು ತುಂಬಿಸಲಿಕ್ಕೆ ಅನುಮತಿ ಕೊಡುತ್ತೇವೆ. ಆಯಾಯ ಇಲಾಖೆಯವರು ಇದನ್ನು ಅಸೆಸ್‌ಮೆಂಟ್ ಮಾಡಬೇಕು. ಅದನ್ನು ಸಮೀಕ್ಷೆ ಮಾಡಿ, ಪರಿಶೀಲನೆ ಮಾಡಿ ಎಲ್ಲಿ

ಅವಶ್ಯಕತೆ ಇದೆ ಎಂದು ಹೇಳಿದರೆ ಅದನ್ನು ತುಂಬಿಸಲಿಕ್ಕೆ ನಾವು ಎಲ್ಲ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಯಡಿಯೂರಪ್ಪನವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನ ವಿಚಾರ ಹೇಳಿದರು. ತಾವು ಹೇಳಿದ ಹಾಗೆ ವಿನಾಗಿದೆ ಎಂದರೆ, ಎಂಪ್ಲಾಯ್‌ಮೆಂಟ್ ವ್ಯವಸ್ಥೆಯೇ ಸ್ವಲ್ಪ ಶಿಥಿಲವಾಗಿದೆ. ಅದಕ್ಕೆ ಕಾರಣ ನಾವೇ ಸ್ಟೆಫಂಡಿಯವರನ್ನು ನೇಮಕ ಮಾಡುತ್ತೇವೆ, ಅವರನ್ನು ಖಾಯಂ ಮಾಡುತ್ತೇವೆ, ಕಂಟ್ರಾಕ್ಟ್ ಬೇಸಿಸ್‌ನಲ್ಲಿ ನೇಮಕ ಮಾಡುತ್ತೇವೆ, ಅವರನ್ನು ಖಾಯಂ ಮಾಡುತ್ತೇವೆ. ದಿನಗೂಲಿ ನೌಕರರನ್ನು ನೇಮಕ ಮಾಡುತ್ತೇವೆ, ಅವರನ್ನು ಖಾಯಂ ಮಾಡುತ್ತೇವೆ. ಇದರಿಂದಾಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿಗೆ ಇರತಕ್ಕಂತಹ ಘನತೆ, ಪಾವಿತ್ರ್ಯತೆ ಮತ್ತು ಪ್ರಾಮುಖ್ಯತೆ ವಿನು ಇದೆ ಅದು ತಪ್ಪಿ ಹೋಗಿದೆ. ಬಹುಶಃ ಇನ್ನು ಮುಂದೆ ಸರಕಾರವಾಗಲೀ ನಾವೆಲ್ಲ ಕೂಡಿ ಎಲ್ಲಾ ಕಡೆ ಎಂಪ್ಲಾಯ್‌ಮೆಂಟ್ ಎಕ್ಸೆಚೇಂಜಿನಲ್ಲಿ ೧೫-೧೬-೧೭ ವರ್ಷಗಳಿಂದ ವಿನು ಕಾಯುತ್ತಿದ್ದಾರೆ ಅವರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಒಂದು ಕಡೆ ಅವರು ಉದ್ಯೋಗಕ್ಕಾಗಿ ಅಲ್ಲಿ ಕಾಯುತ್ತಿದ್ದಾರೆ, ಮತ್ತೊಂದು ಕಡೆ ನಾವು ಹುದ್ದೆಗಳನ್ನು ತುಂಬಿಕೊಂಡು ಬರುತ್ತಿದ್ದೇವೆ. ಆ ವ್ಯವಸ್ಥೆಗೆ ನಮ್ಮ ಸರಕಾರವಾಗಲೀ, ನಮ್ಮ ಜನರಿಗಾಗಲೀ ಇರತಕ್ಕಂತಹ ನಿಷ್ಠೆ ಶಿಥಿಲವಾಗಿದೆ. ಬಹುಶಃ ಅದನ್ನು ಪುನಃ ಪುನರುಜ್ಜೀವನಗೊಳಿಸತಕ್ಕಂತಹ ಒಂದು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಸರಕಾರ ಇದರ ಬಗ್ಗೆ ಆಲೋಚನೆ ಮಾಡುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:- 'ಡಿ' ಗ್ರೂಪ್ ನೌಕರರ ನೇಮಕಕ್ಕೆ ಕೂಡ ಸರಕಾರದಿಂದ ಎಕಾನಮಿ ಮೆಷರ್ ಇದೆ. ಸರಕಾರದ ಕಾಲೇಜು, ಹೈಸ್ಕೂಲುಗಳಲ್ಲಿ ನೋಡಬಹುದು. ಅಲ್ಲಿ ಒಬ್ಬ ಪ್ಯೂನ್ ಇಲ್ಲ. ಉದಾಹರಣೆಗೆ ಹೇಳುವುದಾದರೆ ನೇಸರ್ಗಿ ಡಿಗ್ರಿ ಕಾಲೇಜಿನಲ್ಲಿ ಸೈನ್ಸ್, ಆರ್ಟ್ಸ್, ಕಾಮರ್ಸ್ ಕೋರ್ಸುಗಳು ಇವೆ, ಅಲ್ಲಿ ಒಬ್ಬ ಪ್ಯೂನ್ ಇಲ್ಲ, ಅಂತಹ ಕಡೆಗೆ ಎಕಾನಮಿ ಮೆಷರ್ ಅನ್ನು ಇಟ್ಟರೆ ಹೇಗೆ? ಇದನ್ನು ಯಾವಾಗ ತೆಗೆಯುತ್ತೀರಿ. ಅವರನ್ನು ಕೇಳಿದರೆ ಎಕಾನಮಿ ಮೆಷರ್ ಇದೆ, ಆದ್ದರಿಂದ ತುಂಬುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ! ಎಷ್ಟು ದಿವಸದ ಒಳಗೆ ಕೊನೆಪಕ್ಷ 'ಡಿ' ಗ್ರೂಪ್ ನೌಕರರನ್ನು ತುಂಬುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ನೂರು ದಿವಸದ ಒಳಗೆ ಇದನ್ನು ಮಾಡಿ. ನಿಮ್ಮ ಕಛೇರಿಯಲ್ಲಿ ಒಬ್ಬ ಪ್ಯೂನ್ ಇಲ್ಲದಿದ್ದರೆ ಹೇಗೆ ಕೆಲಸ ಆಗುತ್ತದೆ ಎಂದು ನಿಮಗೆ ಗೊತ್ತಿದೆ. ಅಂಥಾದ್ದರಲ್ಲಿ ಸರಕಾರದ ಡಿಗ್ರಿ ಕಾಲೇಜಿನಲ್ಲಿ ಸಹ ಒಬ್ಬ ಪ್ಯೂನ್ ಇಲ್ಲ ಅಂದರೆ ಹೇಗಾಗುತ್ತದೆ ಎಂಬುದನ್ನು ತಾವು ವಿಚಾರ ಮಾಡಬೇಕು. ಇದನ್ನು ತುಂಬುವುದಕ್ಕೆ ವಿನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಪ್ಯೂನ್ ಆಗಲೀ, ಆಟೆಂಡರ್ ಆಗಲೀ, ಅಧಿಕಾರಿಗಳ, ಸರಕಾರದ ಪ್ರತಿಷ್ಠೆಗಾಗಿ ಇರಬಾರದು. ಅವಶ್ಯಕತೆಗೆ ಸ್ಪಂದಿಸಿ ನಾವು ನೇಮಕ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇವೆ. ನಿರ್ಬಂಧವನ್ನು ಈ ರೀತಿ ಕಟ್ಟುನಿಟ್ಟಾಗಿ ನಾವು ಹೇರಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಉದ್ಯೋಗ ವಿನಿಮಯ ಕೇಂದ್ರದಲ್ಲಿ ನಾವು ನಮ್ಮ ಹೆಸರನ್ನು ನೊಂದಾವಣೆ ಮಾಡಿಕೊಂಡಿರತಕ್ಕಂತಹ ಸಂತೋಷ ಬಿಟ್ಟರೆ ಬೇರೇನೂ ಇಲ್ಲ. ೧೦-೨೦ ವರ್ಷಗಳಿಂದ ಲಕ್ಷಾಂತರ ಜನರಿಗೆ ಕೆಲಸ ಸಿಗಲಿಲ್ಲ. ನಮ್ಮ ಸರಕಾರದ ಆಡಳಿತ ಕನ್ನಡದಲ್ಲಿ ಆಗಬೇಕು, ಕರ್ನಾಟಕ ರಾಜ್ಯದಲ್ಲಿರತಕ್ಕಂತಹವರಿಗೇ ಉದ್ಯೋಗ ಕೊಡಬೇಕೆಂಬ ನೀತಿ ಇದೆ. ಆದರೆ ನೂರಕ್ಕೆ, ಅಂ ಭಾಗ ತಮಿಳುನಾಡಿನವರಿಗೆ, ಆಂಧ್ರದವರಿಗೆ ಕೇರಳದವರಿಗೆ ಇಲ್ಲಿ ಉದ್ಯೋಗ ಸಿಗುತ್ತಿದೆ. ಇದರ ಬಗ್ಗೆ ಸರಕಾರ ಪರಿಶೀಲನೆ ಮಾಡಲಿಲ್ಲ. ಇದರ ಜೊತೆಗೆ ಸರಕಾರದ ನೀತಿ ಅಂದರೆ ಉದ್ಯೋಗ ಕೊಡತಕ್ಕಂತಹ ನೀತಿ ವಿನು ಎಂಬುದನ್ನು ಹೇಳಬೇಕು, ಮತ್ತು ಈ ನೀತಿ ಬದಲಾವಣೆಯಾಗಬೇಕು. ಕೆಲವು ಕಡೆ ತಾತ್ಕಾಲಿಕವಾಗಿ ಇದ್ದಾರೆ, ಇನ್ನು

ಕೆಲವು ಕಡೆಗಳಲ್ಲಿ ಉದ್ಯೋಗ ಖಾಲಿ ಇದೆ. ಇನ್ನು ಕೆಲವು ಕಡೆ ಉದ್ಯೋಗ ಎನಿಮಯ ಕೇಂದ್ರವೆಂದು ಹೇಳುತ್ತೀರಿ, ಒಟ್ಟಿನಲ್ಲಿ ಇದು ಗೊಂದಲಮಯವಾಗಿದೆ. ಇದನ್ನು ಸರಿಪಡಿಸುವುದಕ್ಕೆ ಸರಕಾರದವರು ಹೊಸ ಉದ್ಯೋಗ ನೀತಿಯನ್ನು ಪ್ರಾರಂಭ ಮಾಡುತ್ತೀರಾ ಎಂದು ಅಂತಿಮವಾಗಿ ಹೇಳುತ್ತಿದ್ದೇನೆ. ಅರೆಕಾಲಿಕ, ಸ್ವೆಫೆಂಡರಿ ಪದವೀಧರರು ಹತ್ತಾರು ವರುಷಗಳಿಂದ ತಮ್ಮ ಉದ್ಯೋಗಕ್ಕಾಗಿ ಕಾಲ ಕಳೆಯುತ್ತಿದ್ದಾರೆ. ಇದರ ಬಗ್ಗೆ ಸರಕಾರ ತನ್ನ ನಿರ್ಧಾರ ಏನು ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಯಡಿಯೂರಪ್ಪನವರ ಮಾತಿಗೆ ನಾನು ಹೇಳಿದ್ದೇನೆ. ಈಗ ಏನಾಗಿದೆಯೆಂದರೆ, ಸರ್ಕಾರ ನಡೆಯುವ ನೀತಿಯೇ ನೀತಿ ಆಗಿಬಿಟ್ಟಿದೆ. ಅದಕ್ಕೆ ತಾವು ಹೇಳಿದ್ದು ಸರಿ. ಸ್ಪಷ್ಟವಾದಂತಹ ಒಂದು ನೀತಿ ಇರಬೇಕಾಗುತ್ತದೆ. ಅದು ಇಲ್ಲದೆ ಇದ್ದರೆ ಏನಾಗುತ್ತದೆಯೆಂದರೆ, ಇದೇ ತರಹ ಅಡಾಕ್ ಅಪ್ರೋಚ್ ಮತ್ತೆ ಬೇರೆ ಬೇರೆ ರೀತಿಯಲ್ಲಿ ಆಗಿ, ತಾತ್ಕಾಲಿಕವೇ ಖಾಯಂ ಆಗಿಬಿಟ್ಟಿದೆ, ಖಾಯಂ ತಾತ್ಕಾಲಿಕವಾಗಿದೆ. ಈ ತರಹ ಡಿಸ್ಟಾರ್‌ಷನ್ಸ್ ಬಹಳ ನಡೆದಿದೆ. ಅದನ್ನು ನಿಲ್ಲಿಸಲಿಕ್ಕೆ ತಾವು ಒಳ್ಳೆಯ ಸೂಚನೆ ಕೊಟ್ಟಿದ್ದೀರಿ. ನನಗೂ ಅನ್ನಿಸುತ್ತದೆ, ಇಂತಹ ಉದ್ಯೋಗ ನೀತಿ ಬೇಕಾಗುತ್ತದೆ. ಅದಕ್ಕೆ ಅನುಗುಣವಾಗಿ ನಡೆಯಬೇಕಾಗುತ್ತದೆ. ಆ ನೀತಿಗೆ ಏನಾದರೂ ರಿಲ್ಯಾಕ್ಸ್ ಮಾಡಿದರೆ ನಾವು ಅದಕ್ಕೆ ಪ್ರತ್ಯೇಕವಾದಂತಹ, ಸರಿಯಾದಂತಹ ಸಬೂಬು ಕೊಡಬೇಕಾಗುತ್ತದೆ.

(ಗೊಂದಲ)

ವಿಷಯ:- ಮದ್ಯಪಾನ ನಿರೋಧ ಜಾರಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨:- (೪೨೪)
ಶ್ರೀ ಡಿ.ಆರ್. ಪಾಟೀಲ್ (ಗದಗ್)
ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮದ್ಯಪಾನದಿಂದ ಬಡ ಕುಟುಂಬಗಳ ಆರ್ಥಿಕ ಸಾಮಾಜಿಕ ಸ್ಥಿತಿಗಳಿಗೆ ಧಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಆ) ಪಾನ ನಿರೋಧ ಜಾರಿಗೊಳಿಸಲು ಸರ್ಕಾರ ಪರಿಶೀಲಿಸುವುದೇ?
ಇ) ಪಾನ ನಿರೋಧ ಜಾರಿಯಿಂದ ರಾಜ್ಯದ ಬೊಕ್ಕಸಕ್ಕೆ ಆಗುವ ಕೊರತೆ ಎಷ್ಟು?
ಈ) ಈ ಕೊರತೆ ತುಂಬಿಕೊಳ್ಳಲು ಪರ್ಯಾಯಗಳನ್ನು ಸರ್ಕಾರ ಪರಿಶೀಲಿಸುತ್ತಿದೆಯೇ?

ಶ್ರೀ. ಎಂ. ವೀರಪ್ಪ ಮೊಯಿಲಿ
(ಮುಖ್ಯ ಮಂತ್ರಿಗಳು)

ಹೌದು.
ಇಂತಹ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿಲ್ಲ.
ರೂ. ೫೪೦.೭೪ ಕೋಟಿ ರೂ.ಗಳು.
(ಹಾಲಿ ದರಗಳ ಮೇರೆಗೆ)
'ಆ' ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೇ , ಮದ್ಯಪಾನದಿಂದ ಸಾಕಷ್ಟು ಕುಟುಂಗಳಿಗೆ ತೊಂದರೆ ಆಗುತ್ತಿದ್ದರೂ ಸಹ ಪಾನ ನಿರೋಧವನ್ನು ಜಾರಿಗೊಳಿಸಲು ಪರಿಶೀಲಿಸದೆ ಇರಲಿಕ್ಕೆ ಕಾರಣ ಏನು ಎಂದು ಕೇಳುತ್ತೇನೆ.